ನೀರಿನ ಸರಬರಾಜು ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಈ ಯೋಜನೆಗೆ ಈವರೆಗೆ ಖರ್ಚಾಗಿರುವ ಹಣವೆಷ್ಟು; ಹಣ ಖರ್ಚಾದರೂ ಸಹ ಈ ಗ್ರಾಮದ ಹೆಣ್ಣು ಮಕ್ಕಳು 0.75 ಕಿ.ಮೀ.ದಿಂದ 1.00 ಕಿ.ಮೀ. ಅಂತರದಿಂದ ನೀರು ತರುತ್ತಿರುವುದು ನಿಜವೇ?

ಇ) ತಾಂತ್ರಿಕವಾಗಿ ಕಲಸ ಮಾಡದೇ ಇರುವುದರಿಂದ ನೀರು ಸರಬರಾಜಿನಲ್ಲಿ ಆ ಗ್ರಾಮದ ನಾಗರೀಕರಿಗೆ ತೊಂದರೆಯುಂಟು ಮಾಡುತ್ತಿರುವ ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ಕೈಗೊಂಡು ಸರಿಪಡಿಸುವುದು ಯಾವಾಗ?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ಸೇಡಂ ತಾಲ್ಲೂಕಿನ ಹನುಮನಹಳ್ಳಿ ಗ್ರಾಮಕ್ಕೆ ಕಿರು ನೀರು ಸರಬರಾಜು ಯೋಜನೆಯನ್ನು ಒದಗಿಸಲಾಗಿದೆ. ಆದರೆ, ಜಲಮೂಲ (ಕೊಳವೆ ಬಾವಿ) ವಿಫಲವಾದ್ದರಿಂದ ಕುಡಿಯುವ ನೀರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಮೇಲ್ಕಂಡ ಯೋಜನೆಗೆ 2.34 ಲಕ್ಷ ವೆಚ್ಚವಾಗಿರುತ್ತದೆ. ಜಲಮೂಲ ವಿಫಲವಾದ ಕಾರಣ ಮತ್ತು ಅಂತರ್ಜಲ ಕ್ಷೀಣಿಸುತ್ತಿರುವುದರಿಂದ, ಕುಡಿಯುವ ನೀರಿಗೆ ತೊಂದರೆಯುಂಟಾಗಿದ್ದು, ಇದರ ಪರಿಹಾರಕ್ಕಾಗಿ ಕೈಪಂಪು ಕೊಳವೆ ಬಾವಿಗಳ ಆಳ ಹೆಚ್ಚಿಸಿ, ದುರಸ್ತಿ ಮಾಡಿಸಲು ಮತ್ತು ತಾತ್ಕಾಲಿಕವಾಗಿ ಕಲ್ಕಂ ಗ್ರಾಮದ ಜಲಮೂಲದಿಂದ ಗ್ರಾಮಕ್ಕೆ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಇ) ಯೋಜನೆ ಕಾರ್ಯಗತಗೊಳಿಸುವಲ್ಲಿ ತಾಂತ್ರಿಕ ಲೋಪದೋಷಗಳಾಗಿರುವುದಿಲ್ಲ. ಗ್ರಾಮಕ್ಕೆ ಶಾಶ್ವತ ನೀರು ಪೂರೈಕೆಗಾಗಿ ಪರ್ಯಾಯ ಜಲಮೂಲ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಪಿರಿಯಾಪಟ್ಟಣದಲ್ಲಿ ಜಲಾನಯನ ಅಭಿವೃದ್ಧಿಗೆ ಒದಗಿಸಿರುವ ಅನುದಾನ.

1776 (2014)

ಶ್ರೀ ಬಸವರಾಜು ಹೆಚ್.ಸಿ. ಶಾಸಕರು(ಪಿರಿಯಾಪಟ್ಟಣ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಹಿರಿಯಾಪಟ್ಟಣದಲ್ಲಿ ಜಲಾನಯನ ಅಭಿವೃದ್ಧಿಯ ಇಲಾಖೆಯಿಂದ ಮಾಡಿರುವ ಕಾಮಗಾರಿಗಳು ಕಳಪೆಯಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ;

2. ಬಂದಿದ್ದಲ್ಲಿ ಈ ಬಗ್ಗೆ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ;

3. ಜಲಾನಯನ ಅಭಿವೃದ್ಧಿಗೆ ಜಿಲ್ಲಾ ಪಂಚಾಯತಿಯಿಂದ ಹಾಗೂ ತಾಲ್ಲೂಕು ಪಂಚಾಯತಿಯಿಂದ ಎಷ್ಟು ಅನುದಾನವನ್ನು ಒದಗಿಸಲಾಗುತ್ತಿದೆ; ವಿವರ ಒದಗಿಸುವುದು?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

1. ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

2. ಸಂಬಂಧಿಸಿಲ್ಲ.

3. ಜಲಾನಯನ ಅಭಿವೃದ್ಧಿಗೆ ಜಿಲ್ಲಾ ಪಂಚಾಯತ್‌ನಿಂದ ಹಾಗೂ ತಾಲ್ಲೂಕು ಪಂಚಾಯತಿಯಿಂದ ಒದಗಿಸಲಾದ ಹಣದ ವಿವರ ಈ ಕೆಳಕಂಡಂತೆ ನೀಡಿದೆ.

(ರೂ.ಲಕ್ಷಗಳಲ್ಲಿ)

ಯೋಜನೆ	ತಾ.ಪಂ.	ಜಿ.ಪಂ.	ಒಟ್ಟು
ಡಿಪಿಎಪಿ			
1ನೇ ಹಂತ	-	ರೂ.12.990	12.990
2ನೇ ಹಂತ	-	ರೂ.09.500	09.500
ಉದ್ಯೋಗ ಭರವಸೆ ಯೋಜನೆ:	6.210	5.726	11.936
ಒಟ್ಟು	6.210	28.216	34.426

ಪ್ರೌಢಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಅನುಸರಿಸಬೇಕಾದ ಮಾನದಂಡಗಳು.